ವಿಜಯ ಕರ್ನಾಟಕ

# ಜೈನ್ ವಿವಿ ಘಟಿಕೋತ್ಸವ

**ಬೆಂಗಳೂರು:** ದೇಶವು ಜಾಗತಿಕ ನಾಯಕತ್ವದ ಮನ್ನಣೆ ಪಡೆಯುವಲ್ಲಿ ಯುವಜನತೆಯ ಪಾತ್ರ ಅತಿಮುಖ್ಯ ಎಂದು ವಿಜ್ಞಾನಿ ವಿ ಕೆ ಸಾರಸ್ವತ್ ಅಭಿಪ್ರಾಯಪಟ್ಟರು.

ಜೈನ್ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ‘‘ಕಳೆದ ಶತಮಾನದಿಂದೀಚೆಗೆ ವಿಜ್ಞಾನ ಮತ್ತು ತಂತ್ರಜ್ಞಾನವು ಜನಜೀವನದ ಮೇಲೆ ಅಭೂತಪೂರ್ವ ಪ್ರಭಾವ ಬೀರಿದೆ. ಇನ್ನು ಕಳೆದ ಮೂರು ದಶಕಗಳಲ್ಲಿ ನಮ್ಮ ದೇಶದಲ್ಲಿ ನಡೆಯುತ್ತಿರುವ ಕ್ಷಿಪಣಿ ಬೆಳವಣಿಗೆಗಳು ಭವ್ಯ ವೈಜ್ಞಾನಿಕ ಭಾರತದ ಪರಿಕಲ್ಪನೆಯ ಕನಸಿಗೆ ನಾಂದಿ ಹಾಡಿದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಯುವಪೀಳಿಗೆಗೆ ಔದ್ಯೋಗಿಕ ಅವಕಾಶಗಳನ್ನೂ ಸೃಷ್ಟಿಸಿದೆ,’’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**2,422 ಮಂದಿಗೆ ಪದವಿ ಪ್ರದಾನ:** ಅರ್ಥಶಾಸ್ತ್ರ, ಜೈವಿಕ ತಂತ್ರಜ್ಞಾನ, ಭೌತಶಾಸ್ತ್ರ, ಮನಃಶಾಸ್ತ್ರ, ಸಂಗೀತ, ನೃತ್ಯ, ಸಮೂಹ ಸಂವಹನ ಮುಂತಾದ ವಿಷಯಗಳಲ್ಲಿ ಉತ್ತೀರ್ಣರಾದ 2,422 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. 53 ಪ್ರತಿಭಾನ್ವಿತರಿಗೆ ಚಿನ್ನದ ಪದಕ ಹಾಗೂ ಪದವಿ, ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್ ಪಡೆದ 101 ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.